
ತೃತೀಯ ಲಿಂಗದವರ ಕುರಿತು ಇರುವ ದೃಷ್ಟಿಕೋನ ಬದಲಾವಣೆ, ಅಂಗವಿಕಲರ ಕುರಿತು ಸಾಮಾಜಿಕವಾಗಿ ಇರುವ ಧೋರಣೆಗಳ ಕುರಿತು ಮಕ್ಕಳಿಗೆ ಹೇಳಲು ಕಥೆ–ಪದ್ಯಗಳು ನೆರವಾಗುತ್ತವೆ.



ತಲುಪಬೇಕಾಗುತ್ತದೆ. ಗಂಡು–ಹೆಣ್ಣು ಎಂಬ ಲಿಂಗತ್ವ ಸಮಾನತೆಯು ಒಂದು ರೀತಿಯ ಅಪೇಕ್ಷೆಯಾದರೆ, ಜಾತಿ ತಾರತಮ್ಯ ನಿರ್ಮೂಲನೆ, ಮತಧರ್ಮದ ಸಹಿಷ್ಣುತೆ, ತೃತೀಯ ಲಿಂಗದವರ ಕುರಿತು ಇರುವ ದೃಷ್ಟಿಕೋನ ಬದಲಾವಣೆ, ಅಂಗವಿಕಲರ ಕುರಿತು ಸಾಮಾಜಿಕವಾಗಿ ಇರುವ ಧೋರಣೆಗಳ ಕುರಿತು ಮಕ್ಕಳಿಗೆ ಹೇಳಬೇಕಾಗುತ್ತದೆ. ಈ ಸಂಗತಿಗಳು ಕಥೆ–ಪದ್ಯಗಳ ಮೂಲಕ ಮಕ್ಕಳನ್ನು ತಲುಪುವುದು ಈ ಜಗತ್ತನ್ನು ಮಾನವೀಯಗೊಳಿಸುವ ಪರಿಣಾಮಕಾರಿ ದಾರಿಗಳಲ್ಲೊಂದು.

ಕಥೆಗಳು ಮಕ್ಕಳ ಕಲ್ಪನಾ ಸಾಮರ್ಥ್ಯವನ್ನು ವೃದ್ಧಿಸುತ್ತವೆ ಎಂಬುದು ಬಹುಕಾಲದಿಂದ ನಾವು ನಂಬಿರುವ ವಿಷಯ. ಅದು ನಿಜವೂ ಹೌದು. ಆದರೆ, ಇಂದಿನ ಕಾಲಮಾನದಲ್ಲಿ ಕಲ್ಪನಾ ಸಾಮರ್ಥ್ಯವನ್ನು ವಿಸ್ತರಿಸುವ ಮಾದರಿಯಲ್ಲಿ ಹೊಸ ಕಥೆಗಳನ್ನು ಹೆಣೆಯುವುದು ಸುಲಭವಲ್ಲ. ಯಂತ್ರಗಳನ್ನು ಹೆಚ್ಚು ಬಳಸುವ, ತಂತ್ರಜ್ಞಾನವನ್ನು ಮತ್ತಷ್ಟು ಅವಲಂಬಿಸಿರುವ ನಾವು ಕಥೆಗಳಲ್ಲಿ ಅವುಗಳನ್ನು ಸೇರಿಸಿಕೊಂಡು ಮಕ್ಕಳ ಕಲ್ಪನೆಯ ಗಡಿಯನ್ನು ವಿಸ್ತರಿಸುವುದು ಹೇಗೆ? ಒಂದು ಊರಿನಲ್ಲಿ ಒಬ್ಬ ರಾಜ ಇದ್ದ... ಎಂದು ಕಥೆ ಶುರು ಮಾಡಿದರೆ ಮುಂದಿನ ಸಾಲನ್ನು ಬೆಳೆಸುವುದು ಮಕ್ಕಳಿಗೂ ಕಷ್ಟವಾಗುತ್ತದೆ. ಒಂದು ಕಾಂಪೌಂಡ್ ಮನೆಯಲ್ಲಿ ನಾಯಿ ಇತ್ತು ಎಂಬ ಕಥೆಯನ್ನು ಮಕ್ಕಳು ಬೆಳೆಸುತ್ತ ಹೋಗುವುದು ಸಾಧ್ಯವೇ... ಅಷ್ಟೇ ಅಲ್ಲ, ಹಾಗೆ ಕಥೆಯು ಬೆಳೆಯುತ್ತಿರುವಾಗ ಅಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬಿತ್ತುವುದು ಕೂಡ ಸಾಧ್ಯವಾಗಬೇಕಲ್ಲವೇ. ಮೌಲ್ಯಗಳನ್ನು ಬಿತ್ತುವ ಭರಾಟೆಯಲ್ಲಿ ಅಥವಾ ಹಕ್ಕುಗಳನ್ನು ಪ್ರತಿಪಾದಿಸುವ ಗಡಿಬಿಡಿಯಲ್ಲಿ ಅದು ಮತ್ತೊಬ್ಬರ ಹಕ್ಕುಗಳನ್ನು ಚ್ಯುತಿಗೊಳಿಸುವಂತೆಯೂ ಇರಬಾರದು. ಕರ್ತವ್ಯಗಳಿಗೆ ಸಂಬಂಧಿಸಿ ಮಕ್ಕಳ ಮನಸ್ಸಿನಲ್ಲಿ ಒಂದು ಜಾಗೃತಿಯನ್ನು ಮೂಡಿಸುವಂತೆಯೂ ಅದು ಸಾಗಬೇಕು.

‘ತುಲಿಕಾ ಪ್ರಕಾಶನ’ದ ಪ್ರಕಟಣೆಯ ಕಥೆ ಪುಸ್ತಕವೊಂದರಲ್ಲಿ ಅಂಗವಿಕಲರ ಕುರಿತು ಒಂದು ಕಥೆಯಿದೆ. ಆ ಕಥೆಯಲ್ಲಿ ಎಲ್ಲಿಯೂ, ‘ನೀವೆಲ್ಲರೂ ಅಂಗವಿಕಲರ ಕುರಿತು ಸಹಾನುಭೂತಿ ತೋರಬೇಕು, ಅವರಿಗೆ ಸಹಾಯ ಮಾಡಬೇಕು’ ಎನ್ನುವ ಬೋಧನೆಯ ರೂಪದ ಸಾಲುಗಳೇ ಇಲ್ಲ. ಅದು ಅಂಗವಿಕಲ ಹುಡುಗನೊಬ್ಬ ಬೆರಗಿನ ಮಾತುಗಳಲ್ಲಿ ಹೇಳುವ, ‘ನನಗೆ ಅರ್ಥವಾಗುವುದಿಲ್ಲ’ ಎನ್ನುವ ಹೆಸರಿನ ಕಥೆ. ‘ನನಗೆ ಇನ್ನೂ ಓದಲು ಬರೆಯಲು ಬರುವುದಿಲ್ಲ. ಯಾಕೆಂದರೆ ನಾನು ಬುದ್ಧಿಮಾಂದ್ಯಳು. ಅವು ದೊಡ್ಡ ಎರಡು ಪದಗಳು...’ ಎಂದು ಶುರುವಾಗುವ ಕಥೆ, ಆ ಮಗುವಿಗೆ ಅನೇಕ ವಿಷಯಗಳ ಬಗ್ಗೆ ಬೆರಗು ಇರುವುದನ್ನೂ ಹೇಳುತ್ತದೆ. ‘ಪೆನ್ಸಿಲ್ ಡಬ್ಬಿ ಹಿಡಿದು ನಮಗಾಗಿಯೇ ಇರುವ ವಿಶೇಷ ಕೋಣೆಗೆ ನನ್ನನ್ನು ಕಳುಹಿಸಿದರು. ಒಮ್ಮೆಲೆ ಬಿದ್ದುಬಿಟ್ಟೆ ನಾನು. ಯಾಕೆಂದು ಗೊತ್ತಾಗಲಿಲ್ಲ. ಯಾರೋ ನಕ್ಕಂತೆ ಕೇಳಿತು. ಅದು ನಮ್ಮ ಕ್ಲಾಸಿನ ಶ್ವೇತಾ. ಅವಳ ಕಾಲುಗಳು ಮೇಜಿನ ಕೆಳಕ್ಕೆ ಹೊರಕ್ಕೆ ಚಾಚಿಕೊಂಡಿದ್ದವು. ಅವಳು ನಗುತ್ತಿದ್ದಳು... ನನಗೆ ಅರ್ಥವಾಗದ ಮೊದಲ ಸಂಗತಿ ಇದು...’ ಇದೇ ಮಗು ಆಟದ ಮೈದಾನದಲ್ಲಿ ತಿನ್ನಲು ಬಾಳೆಹಣ್ಣು ಸುಲಿಯುವಾಗ ದೊಪ್ಪನೆ ಅದರ ಮೇಲೆ ಮರಳು ಬೀಳುತ್ತದೆ. ಅದು ಹೇಗೆ, ಒಮ್ಮೆಲೇ ಮರಳು ಬಿತ್ತು ಎಂದು ಆ ಮಗುವಿಗೆ ಅರ್ಥವಾಗುವುದಿಲ್ಲ.

ಬುದ್ಧಿಮಾಂದ್ಯ ಮಗುವಿನ ಕುರಿತ ಕತೆಯಲ್ಲಿ ಯಾವುದೇ ನಿರ್ಣಯಗಳಿಲ್ಲ. ಆದರೆ, ಕಥೆಯನ್ನು ಆಲಿಸುವ ಮಕ್ಕಳು ಆಲಿಸುತ್ತಾ ಆಲಿಸುತ್ತಾ ಆ ಮಗುವಿನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬಲ್ಲರು. ಕಥೆ ಯಾವುದೇ ನೀತಿಬೋಧೆಯನ್ನು ಹೇಳದೇ ಇದ್ದರೂ, ‘ನಾವು ಹೀಗೆ ಮಾಡಬಾರದು’ ಎಂಬ ಎಚ್ಚರವನ್ನು ಮಕ್ಕಳ ಮನದಲ್ಲಿ ಮೂಡಿಸುವಂತಿದೆ.

ಯಾವುದೇ ಕಥೆಯಾಗಲೀ, ಸಹಬಾಳ್ವೆಯನ್ನು ಕಲಿಸುವ ಆಶಯದಿಂದ ಕೂಡಿರಬೇಕು. ಅದರ ಸಾಕಾರದತ್ತ ಕಥೆಗಳನ್ನು ನಿರಂತರವಾಗಿ ಫೈನ್ ಟ್ಯೂನ್ ಮಾಡುತ್ತಾ ಸಾಗಬೇಕಾಗುತ್ತದೆ. ಮಕ್ಕಳ ಕಥೆಗಾರ ಕಥೆಗಾರನಾಗಿಯಷ್ಟೇ ಆದರೆ ಸಾಲದು, ಸಮಾಜ ವಿಜ್ಞಾನಿಯೂ ಆಗಿರಬೇಕು.

## ನಿಮ್ಮ ಕಥೆಯೇನು?

ಈಗ ಪ್ರತಿಕ್ರಿಯಿಸಬೇಕಾದ ಸರದಿ ನಿಮ್ಮದು. ನಿಮ್ಮ ಮಕ್ಕಳಿಗೆ ಕಥೆ ಹೇಳುವ ಅಭ್ಯಾಸ ನಿಮಗಿದೆಯಾ? ಯಾವ ಬಗೆಯ ಕಥೆಗಳನ್ನು ಹೇಳುವಿರಿ? ಅಭ್ಯಾಸ ಇಲ್ಲದಿದ್ದರೆ, ಇನ್ನು ಮುಂದಾದರೂ ಮಕ್ಕಳಿಗೆ ಕಥೆಗಳನ್ನು ಹೇಳಬೇಕು ಎನ್ನಿಸುತ್ತಿದೆಯಾ? ‘ಅಯ್ಯೋ, ನಮ್ಮ ಕಥೆಯೇ ನಮಗೆ ಸಾಕಾಗಿದೆ’ ಎಂದು ನಿಟ್ಟುಸಿರುಬಿಟ್ಟಿರಾ? ಉಹುಂ, ಜವಾಬ್ದಾರಿಯಿಂದ ನುಣುಚಿಕೊಳ್ಳುವುದು ಜಾಣ ಪಾಲಕರ ಲಕ್ಷಣವಲ್ಲ. ಈ ಪ್ರಶ್ನೆಗಳಿಗೆ ನೀವು ಥಟ್ ಅಂತ ಉತ್ತರಿಸದಿದ್ದರೂ ಚಿಂತೆಯಿಲ್ಲ, ತಕ್ಷಣಕ್ಕೆ ಕಥೆಗಾರರಾಗದಿದ್ದರೂ ಪರವಾಗಿಲ್ಲ. ನಿಧಾನವಾಗಿ ಯೋಚಿಸಿದರೂ ಸಾಕು. ಆ ಯೋಚನೆ, ನಿಮ್ಮಲ್ಲಿ ಹೊಸ ಕಥೆಗಳನ್ನು ಅರಳಿಸಲಿ. ಆ ಕಥೆಗಳು ಮಕ್ಕಳ ಮನಸ್ಸನ್ನು ಬೆಳಗಿಸಲಿ. ಆ ಮಕ್ಕಳು, ಲಿಂಗ ಸಮಾನತೆಯ ಸುಂದರ ಸಮಾಜವೊಂದಕ್ಕೆ ಕಾರಣವಾಗಲಿ.

ಪ್ರತಿಕ್ರಿಯಿಸಿ: feedback@sudha.co.in